

# ಮಂದಸ್ಮಿತ ನಟನ ಕಾಡುವ ನೆನಪು

■ ವಿಶಾಖ ಎನ್.

ಹಿಂದಿ ನಟ ಸಂಜೀವ್ ಕುಮಾರ್ ಅವರ ಮುಖದಲ್ಲಿ ಸದಾ ಗಾಂಭೀರ್ಯ ಇರುತ್ತಿತ್ತು. ಮೃದು ಮಾತು, ನಾಜೂಕಾದ ಹಾವಭಾವ. ಅಳೆದು ತೂಗಿದಷ್ಟೆ ಪ್ರತಿಕ್ರಿಯೆ. ಅತಿ ತಣ್ಣಗಿನ ಅಭಿನಯದಿಂದ ಕೊಲ್ಲುವುದು ಎಂದು ಇಂತಹ ನಟರನ್ನು ಸಿನಿಮಾ ವೈಯಾಕರಣಿಗಳು ಕರೆಯುವುದುಂಟು. ಕ್ಯಾನ್ಸರ್‌ನಿಂದಾಗಿ ಇತ್ತೀಚೆಗೆ ಅಗಲಿದ ನಟ ಶರತ್ ಬಾಬು ಅವರಲ್ಲೂ ಈ ಎಲ್ಲ ಗುಣಗಳು ಇದ್ದವು. ಆದರೆ, ತಣ್ಣಗಿನ ಅಭಿನಯದಿಂದ ಕೊಲ್ಲುವ ಗುಣ ಅಷ್ಟಾಗಿ ಇರಲಿಲ್ಲ. ಮಂದಸ್ಮಿತರಾಗಿರುತ್ತಿದ್ದ ಅವರ ದುಂಡುಮುಖದಲ್ಲಿ ಭಾವದ ಗೆರೆಗಳು ಅಷ್ಟಾಗಿ ಮೂಡುತ್ತಿರಲಿಲ್ಲ. ಆದರೆ, ಅವರ ಕಣ್ಣುಗಳಿಗೆ ಆ ಕೊರೆಯನ್ನು ಮರೆಸುವ ಶಕ್ತಿ ಇತ್ತು. ಚೆಂದದ ಅವರ ವದನ ನೋಡುಗರ ನೋಟವನ್ನು ಸೆಳೆದುಬಿಡುತ್ತಿತ್ತು.

‘ಅಮೃತ ವರ್ಷಿಣಿ’ ಕನ್ನಡ ಸಿನಿಮಾವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಅದರಲ್ಲಿ ರಮೇಶ್ ಅರವಿಂದ್ ಹಲವು ಏರಿಳಿತಗಳನ್ನು ದಾಟಿಸಿದ ಪಾತ್ರದಲ್ಲಿ ಚಿತ್ರವನ್ನು ಆವರಿಸಿಕೊಂಡಿದ್ದರು. ಶರತ್ ಬಾಬು ಪಾತ್ರ ಮಾತ್ರ ತಣ್ಣಗೆ, ಅತಿ ತಣ್ಣಗೆ. ಸುಹಾಸಿನಿ ಅವರ ಗಂಡನಾಗಿ ಅವರದ್ದು ಸುಭಗನ ಪಾತ್ರ. ತುಂಟತನವನ್ನು ಅವರು ತೋರಿದರೂ ಅದು ಪ್ರೇಕ್ಷಕರಿಗೆ ಹದವರಿತಂತೆ ದಾಟುತ್ತಿರಲಿಲ್ಲ. ರೊಮ್ಯಾಂಟಿಕ್ ಅನ್ನಬಹುದಾದ ಸನ್ನಿವೇಶಗಳಲ್ಲೆಲ್ಲ ಸಂಕೋಚವನ್ನು ಮುಷ್ಟಿಯೊಳಗೆ ಇಟ್ಟುಕೊಂಡಂತೆಯೇ ಅವರು ಇರುತ್ತಿದ್ದುದು.

ಆಂಧ್ರಪ್ರದೇಶದ ಶ್ರೀಕಾಕುಲಂ ಜಿಲ್ಲೆಯ ಅಮದಲವಾಲಸ ಚಕ್ರವರ್ತಿ ಅಶೋಕನ ಕಾಲದಲ್ಲಿ ಹರಳೆಣ್ಣೆಗೆ ಖ್ಯಾತಿಯಾಗಿತ್ತು. ಯಾರಾದರೂ ಮಂದಬುದ್ಧಿ ತೋರಿಸಿದರೆ ಹರಣೆಳ್ಳೆ ಎಂದು ಆಡಿಕೊಳ್ಳುವುದನ್ನು ಕಂಡಿದ್ದೇವೆ. ಆ ಊರಿಗೂ ಈ ಹರಳೆಣ್ಣೆಗೂ ಸಂಬಂಧವಿಲ್ಲ ಎನ್ನಿ. ಆದರೆ, ಶರತ್ ಬಾಬು ಅದಕ್ಕೆ ತದ್ವಿರುದ್ಧ ರೀತಿಯಲ್ಲಿ ಇದ್ದರು. ಅಭಿನಯಕ್ಕೆ ಕಣ್ಣೇ ಮುಖ್ಯ ಎಂದು ನಂಬಿದ್ದ ನಟರಲ್ಲಿ ಅವರೂ ಒಬ್ಬರು.

1973ರಲ್ಲಿ ‘ರಾಮರಾಜ್ಯಂ’ ಎಂಬ ತೆಲುಗು ಸಿನಿಮಾದಲ್ಲಿ ನಟಿಸುವ ಮೂಲಕ ಬೆಳ್ಳಿತೆರೆ ಮೇಲೆ ಕಾಣಿಸಿಕೊಂಡರು. ಆಮೇಲೆ ಅವರು ಜನಪ್ರಿಯರಾದದ್ದು ತಮಿಳು ಚಿತ್ರರಂಗದಲ್ಲಿ. 1978ರಲ್ಲಿ ತೆರೆಕಂಡ ‘ನಿಳಲ್ ನಿಜಮಾಗಿರದು’ ತಮಿಳು ಚಿತ್ರದಲ್ಲಿ ಕಮಲಹಾಸನ್ ಜತೆ ನಟಿಸಿ, ಅವರು ಆ ಚಿತ್ರರಂಗದಲ್ಲಿ ಪದಾರ್ಪಣೆ ಮಾಡಿದ್ದು, ‘ಸಾಗರ ಸಂಗಮಂ’ ಸಿನಿಮಾದಲ್ಲಿ ಕಮಲಹಾಸನ್ ನೆನಪಿನಲ್ಲಿ ಎಷ್ಟಾಗಿ ಉಳಿದಿರುವರೋ, ಶರತ್ ಬಾಬು ಪಾತ್ರವೂ ಅಷ್ಟೇ ಸ್ಮರಣೆಗೆ ಬರುತ್ತದೆ. ‘ಸಿತಾರಾ’ ತೆಲುಗು ಚಿತ್ರದಲ್ಲಿ ಭಾನುಪ್ರಿಯಾ–ಸುಮನ್ ಇಬ್ಬರ ಪಾತ್ರಗಳು ಸ್ಮೃತಿಗೆ ಬರುವಂತೆ ಈ ನಟನೂ ನೆನಪಿಗೆ ನಿಲುಕುತ್ತಾರೆ.

ಜನಪ್ರಿಯ ಚಿತ್ರ ರಸಿಕರು ಈ ಸಿನಿಮಾಗಳಿಗಿಂತ ಹೆಚ್ಚಾಗಿ ಶರತ್ ಬಾಬು ಅವರನ್ನು ರಜನಿಕಾಂತ್ ಚಿತ್ರಗಳಿಂದ ಗುರುತಿಸುವುದು ಹೆಚ್ಚು. ‘ಮುಳ್ಳುಂ ಮಲರುಂ’, ‘ಅಣ್ಣಾ ಮಲೈ’, ‘ಮುತ್ತು’ ಹಾಗೂ ‘ಬಾಬಾ’ ಸಿನಿಮಾಗಳಲ್ಲಿ ರಜನಿಕಾಂತ್ ಜತೆ ಶರತ್ ಬಾಬು ತೆರೆ ಹಂಚಿಕೊಂಡಿದ್ದಾರೆ.

ಶರತ್ ಅಗಲಿದ ಮೇಲೆ ರಜನಿ ಅವರ ವ್ಯಕ್ತಿತ್ವವನ್ನು ಕೆಲವು ಉದಾಹರಣೆಗಳ ಮೂಲಕ ಕಟ್ಟಿಕೊಟ್ಟರು. ರಜನಿ ಅವರ ಎದುರು ಸಿಗರೇಟು ಸೇದುತ್ತಿರಲಿಲ್ಲವಂತೆ. ಅದಕ್ಕೆ ಕಾರಣ, ಒಮ್ಮೆ ಶರತ್ ಸಿಗರೇಟನ್ನು ಅವರ ಬಾಯಿಯಿಂದ ಕಿತ್ತು ಬಿಸಾಡಿದ್ದು. ಇನ್ನೊಮ್ಮೆ, ಚಿತ್ರೀಕರಣದಲ್ಲಿ ಒಂದು ಶಾಟ್ ಓಕೆ ಮಾಡಲು ಪದೇಪದೇ ರಜನಿ ಹೆಣಗಾಡುತ್ತಿದ್ದರು. ಆಗ ಶರತ್ ಖುದ್ದು ಸಿಗರೇಟು ಕೊಟ್ಟು, ಸೇದಿ ನಿರಾಳವಾಗಿ ಬರುವಂತೆ ಸಲಹೆ ಇತ್ತಿದ್ದರು. ಇವೆರಡನ್ನೂ ರಜನಿ ಸ್ಮರಿಸಿಕೊಂಡರು. ಮುಖದಲ್ಲಿ ಭಾವೋದ್ವೇಗವನ್ನಾಗಲೀ, ಕೋಪವನ್ನಾಗಲೀ ಎಂದೂ ತಾವು ಕಂಡಿರಲಿಲ್ಲ ಎನ್ನುವುದೂ ಸೂಪರ್‌ಸ್ಟಾರ್ ಕೊಟ್ಟ ಸರ್ಟಿಫಿಕೇಟ್.

ಶರತ್ ಬಾಬು ನಾಯಕ ಆಗಬೇಕೆಂದುಕೊಂಡೇ ಚಿತ್ರರಂಗಕ್ಕೆ ಕಾಲಿಟ್ಟರೂ, ಆಮೇಲೆ ತೂಕದ ಪಾತ್ರಗಳನ್ನು ಚೆನ್ನಾಗಿ ಆರಿಸಿಕೊಂಡರು. ಕೆ. ಬಾಲಚಂದರ್, ವಂಶಿ, ದಾಸರಿ ನಾರಾಯಣ್ ರಾವ್ ತರಹದ ನಿರ್ದೇಶಕರು ಕೇಂದ್ರ ಪಾತ್ರವನ್ನಷ್ಟೇ ಅಲ್ಲದೆ, ಅದರ ಜತೆಗಿನ ಮುಖ್ಯ ಪಾತ್ರವೊಂದಕ್ಕೂ ಉತ್ತಮ ಪೋಷಣೆ ನೀಡುತ್ತಿದ್ದರು. ‘ಸಾಗರ ಸಂಗಮಂ’ನಲ್ಲಿನ ರಘುಪತಿ ಪಾತ್ರ ನಮಗೆ ಇದೇ ಕಾರಣಕ್ಕೆ ನೆನಪಲ್ಲಿದೆ. ‘ಸ್ವಾತಿಮುತ್ಯಂ’ ಸಿನಿಮಾದಲ್ಲಿ ನಟಿ ರೇವತಿ ಅಭಿನಯಿಸಿದ್ದ ಪಾತ್ರದ ಅಸಹಾಯಕ ಅಣ್ಣನಾಗಿ ಅವರ ಕಣ್ಣು ತುಳುಕಿಸಿದ್ದ ಅಭಿನಯ ಮರೆಯಲುಂಟೆ?

ಸತ್ಯಂಬಾಬು ದೀಕ್ಷಿತುಲು ಎನ್ನುವುದು ಶರತ್ ಅವರ ಮೂಲ ಹೆಸರು. ತೆಲುಗಿನ ‘ವಕೀಲ್ ಸಾಬ್’ ಅವರು ನಟಿಸಿದ ಕೊನೆಯ ಸಿನಿಮಾ. ಟಿ.ವಿ. ಧಾರಾವಾಹಿಗಳ ನಂಟೂ ಅವರಿಗಿತ್ತು. ಕನ್ನಡ, ಮಲೆಯಾಳಂ ಸಿನಿಮಾಗಳಲ್ಲೂ ಅವರು ಅಭಿನಯಿಸಿದ್ದಕ್ಕೆ ಉದಾಹರಣೆಗಳಿವೆ. ಬದುಕಿನ ಕೊನೆಯ ಒಂದು ತಿಂಗಳು ಶರತ್ ಬಾಬು, ಕ್ಯಾನ್ಸರ್ ಒಡ್ಡಿದ ಬಹು ಅಂಗಾಂಗ ವೈಫಲ್ಯದ ಸಮಸ್ಯೆಯಿಂದ ಬಳಲಿದರು. ಆಗ ಅವರ ಮುಖಭಾವ ಹೇಗಿತ್ತೆನ್ನುವುದು ಅವರ ಕುಟುಂಬದವರಿಗಷ್ಟೆ ಗೊತ್ತು. ಪ್ರೇಕ್ಷಕರಿಗೆ ನೆನಪಿನಲ್ಲಿರುವುದು ಅವರ ಅದೇ ಮಂದಸ್ಮಿತ ಸುಂದರ ವದನ.

ಪ್ರತಿಕ್ರಿಯಿಸಿ: feedback@sudha.co.in